# ಜಾಣ ಗೆಳೆಯರು

■ ಗುರುನಾಥ ಶಿ. ಸುತಾರ
ಕಲೆ: ಸಂತೋಷ್ ಸಸಿಹಿತ್ಲು



ಅದು ಸಿಗೇನಹಳ್ಳಿ ಎಂಬ ಪುಟ್ಟ ಗ್ರಾಮ. ಹೆಚ್ಚಾಗಿ ಕೃಷಿ ಕುಟುಂಬಗಳನ್ನು ಹೊಂದಿದ ಊರು. ಹಳ್ಳಿಯಿಂದ ಅರ್ಧ ಕಿಲೋಮೀಟರ್ ಅಂತರದಲ್ಲಿ ಸೋಮಲಿಂಗ ಎಂಬ ರೈತನ ಜಮೀನು ಇತ್ತು. ಆತ ಐದು ಎಕರೆ ಜಮೀನಿನಲ್ಲಿ ತೋಟಗಾರಿಕೆ ಫಸಲು ಬೆಳೆಯುತ್ತಾ ಕುಟುಂಬದೊಂದಿಗೆ ಸುಖ ಜೀವನ ಸಾಗಿಸುತ್ತಿದ್ದ. ಈತನ ತೋಟದ ಅನತಿ ದೂರದಲ್ಲಿಯೇ ಸರಕಾರಿ ಶಾಲೆ ಒಂದಿತ್ತು. ಅಲ್ಲಿ ಕೇವಲ ಐವತ್ತು ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದರು. ಹಳ್ಳಿಯಿಂದ ಅವರೆಲ್ಲರೂ ನಡೆದುಕೊಂಡೇ ಶಾಲೆಗೆ ಬರುತ್ತಿದ್ದರು. ಹೋಗುವಾಗ ರೈತ ಸೋಮಲಿಂಗನ ತೋಟದಲ್ಲಿಯ ಹೂವು ಹಣ್ಣಿನ ಗಿಡ ಮರಗಳನ್ನು ನೋಡುತ್ತಾ ಕಣ್ಮನ ತುಂಬಿಕೊಂಡು ಸಾಗುತ್ತಿದ್ದರು. ಅದರಲ್ಲಿಯೂ ರಾಮು ಹಾಗೂ ಆತನ ನಾಲ್ಕು ಜನ ಗೆಳೆಯರು ಆ ರೈತನ ಪ್ರೀತಿ ಗೌರವಕ್ಕೆ ಪಾತ್ರರಾಗಿದ್ದರು. ಎಲ್ಲ ವಿದ್ಯಾರ್ಥಿಗಳಿಗೂ ಆಗಾಗ ಸೋಮಲಿಂಗನು ವಿವಿಧ ಹಣ್ಣು ಕೊಡುವ ಮೂಲಕ ಅವರಿಗೆ ಮತ್ತಷ್ಟು ಹತ್ತಿರವಾಗಿದ್ದ.

ರೈತನ ತೋಟಕ್ಕೆ ಗ್ರಾಮದ ಕೆಲ ಜನರಿಂದ ಆಗಾಗ ತೊಂದರೆ ಉಂಟಾಗುತ್ತಿತ್ತು. ಯಾರು ಯಾರದೋ ದನಕರುಗಳನ್ನು ಗದರಿಸುತ್ತ ಈ ತೋಟದ ಕಡೆಗೆ ದಬ್ಬಿ ಹಾನಿ ಉಂಟುಮಾಡುತ್ತಿದ್ದರು. ರೈತ ತುಂಬಾ ಪ್ರಾಮಾಣಿಕ ಹಾಗೂ ಯಾರೊಡನೆಯೂ ದ್ವೇಷ ಬೆಳೆಸಬಾರದೆಂಬ ಸಹೃದಯಿ ಆಗಿದ್ದನು. ಆತ ತೋಟದಲ್ಲಿ ಇಲ್ಲದ ವೇಳೆಯನ್ನು ಗಮನಿಸಿ ಕೆಲ ಜನರು ಈ ರೀತಿ ದ್ರೋಹ ಎಸಗುತ್ತಿರುವುದು ತುಂಬಾ ನೋವಿನ ಸಂಗತಿಯಾಗಿತ್ತು.

ರಾಮು ಹಾಗೂ ಆತನ ಕೆಲಗೆಳೆಯರು ಇದನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದರು. 'ನಮಗೆಲ್ಲರಿಗೂ ರೈತ ಸೋಮಲಿಂಗನು ಮಾಡುವ ಉಪಕಾರಕ್ಕೆ ಪ್ರತ್ಯುಪಕಾರ ಸಲ್ಲಿಸಬೇಕು' ಎಂದು ತೀರ್ಮಾನಿಸುತ್ತಾರೆ. ಶಾಲೆಗಳಿಗೆ ಆಗ ರಜೆ ನೀಡಲಾಗಿತ್ತು. ಈ ನಾಲ್ಕೂ ಜನ ಗೆಳೆಯರು ದಿನಾಲೂ ತೋಟದ ಸುತ್ತ ಗಿರಕಿ ಹೊಡೆಯುತ್ತ ಅಲ್ಲಿಯ ಸೂಕ್ಷ್ಮತೆ ಅರಿಯಲು ಯತ್ನಿಸುತ್ತಾರೆ. ಅದೊಂದು ದಿನ ರೈತ; ಎಂದಿನಂತೆ ಊಟಕ್ಕೆ ಹೋಗುತ್ತಿರುವುದನ್ನೇ ಗಮನಿಸುತ್ತಿದ್ದ ಕೆಲ ಪುಂಡರು, ಆ ಕಡೆ ಈ ಕಡೆ ನೋಡುತ್ತಾ ಹತ್ತಾರು ದನಕರುಗಳನ್ನು ಸೋಮಲಿಂಗನ ತೋಟಕ್ಕೆ ನುಗ್ಗಿಸುತ್ತಾರೆ. ಇದನ್ನೇ ಮರದ ಹಿಂದೆ ಅವಿತು ಗಮನಿಸುತ್ತಿದ್ದ ಮಕ್ಕಳು ಒಂದೊಂದಾಗಿ ಎಲ್ಲ ದನಗಳನ್ನು ಹಗ್ಗದಿಂದ ಬಿಗಿದು ತೋಟದ ಬದುವಿನಲ್ಲಿದ್ದ ಆಲದ ಮರದ ಕೆಳಗೆ ಕಟ್ಟುತ್ತಾರೆ. ಕೂಡಲೇ ಗ್ರಾಮದಲ್ಲಿ ಡಂಗೂರ ಸಾರಿ ಪಂಚಾಯಿತಿ ಸೇರಿಸುತ್ತಾರೆ.

ಸುಮಾರು ಎರಡೂವರೆ ವರ್ಷದಿಂದ ನೀಚ ಕೆಲಸ ಮಾಡುತ್ತಿದ್ದ ರೂವಾರಿಗಳನ್ನು ಗ್ರಾಮಸ್ಥರ ಸಹಾಯದಿಂದ ಬಂಧಿಸಿ ತರಲು ಇಲ್ಲಿ ಪೊಲೀಸರೂ ನೆರವಾಗುತ್ತಾರೆ. ರೈತ ತನಗಾದ ನಷ್ಟವನ್ನು ಭರಿಸಲು ಉತ್ಸುಕತೆ ತೋರಲಿಲ್ಲ. ಆದರೆ ಆತನ ನೋವು ಸಂಕಷ್ಟಗಳನ್ನು ಅರಿತಿದ್ದ ರಾಮು ಹಾಗೂ ಆತನ ಗೆಳೆಯರು ಪಂಚಾಯತಿ ಮುಂದೆ ಒಂದೂ ಬಿಡದೇ ಹೇಳಿದರು. ಪಂಚಾಯತಿ ತೀರ್ಮಾನದಂತೆ ತಪ್ಪು ಮಾಡಿದವರಿಗೆ ಹತ್ತು ಸಾವಿರ ದಂಡ ವಿಧಿಸಿದರು. ಇದೇ ರೀತಿ ಮತ್ತೆ ಇಂಥ ತಪ್ಪುಗಳನ್ನು ಎಸಗಿದರೆ ಗ್ರಾಮದಿಂದ ಹೊರಹಾಕಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಆ ದಂಡದ ರೂಪದಲ್ಲಿ ಬಂದ ಒಂದು ಲಕ್ಷ ರೂಪಾಯಿಗಳನ್ನು ಸೋಮಲಿಂಗನಿಗೆ ಕೊಟ್ಟರು. ಆದರೆ ಆತ ಅದನ್ನು ಸ್ವೀಕರಿಸಲಿಲ್ಲ; ಬದಲಾಗಿ ಆ ಎಲ್ಲ ಹಣವನ್ನು ಶಾಲೆಯ ಶ್ರೆಯೋಭಿವೃದ್ಧಿಗಾಗಿ ಕೊಡಲು ವಿನಂತಿಸಿಕೊಂಡನು. ಗ್ರಾಮಸ್ಥರೆಲ್ಲರೂ ಈತನ ದೊಡ್ಡ ಗುಣ ಹಾಗೂ ಶಿಕ್ಷಣ ಪ್ರೇಮಕ್ಕೆ ಜೋರಾದ ಚಪ್ಪಾಳೆ ತಟ್ಟಿದರು. ಅದರೊಂದಿಗೆ ರಾಮು ಮತ್ತು ಆತನ ಗೆಳೆಯರ ಜಾಣತನದ ಪ್ರಶಂಸೆ ಜೋರಾಗುತ್ತದೆ. ಶಾಲಾ ಕಾರ್ಯಕ್ರಮ ಒಂದರಲ್ಲಿ ಶಿಕ್ಷಣಾಧಿಕಾರಿಗಳ ಸಮ್ಮುಖದಲ್ಲಿ ಅವರನ್ನು ಪ್ರಶಸ್ತಿ ನೀಡಿ ಗೌರವಿಸುತ್ತಾರೆ. ಅವರ ಜಾಣತನ ಅರಿತ ಎಲ್ಲರೂ 'ಜಾಣ ಗೆಳೆಯರು' ಎಂಬ ಅಭಿದಾನದಲ್ಲಿ ಗುರುತಿಸಲು ಆರಂಭಿಸುತ್ತಾರೆ. ■